ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – **560 002**

ಸಂಖ್ಯೆ: BBMP/Addl.Dir/JD North/0453/2014-15 ದಿನಾಂಕ: 09–08–2016.

# ಪ್ರಾರಂಭಿಕ ಪ್ರಮಾಣಪತ್ರ

ಜಂಟಿ ನಿರ್ದೇಶಕರು (ನಗರ ಯೋಜನೆ-ಉತ್ತರ) ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
6625/2016-17
ದಿನಾಂಕ 9/8/16

**ವಿಷಯ:** ಆಸ್ತಿ ಸಂಖ್ಯೆ: 96/1/58/1, 57/1, ಚೊಕ್ಕನಹಳ್ಳಿ ಗ್ರಾಮ, ಥಣಿಸಂದ್ರ ಮುಖ್ಯ ರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವಾರ್ಡ್ ನಂ. 05, ಯಲಹಂಕ ವಲಯ, ಬೆಂಗಳೂರು, ಇಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD North/0453/ 2014-15 , ದಿನಾಂಕ: 02–09–2015.
2) ತಮ್ಮ ಮನವಿ ಪತ್ರ ದಿನಾಂಕ: 17–03–2016.

* * * * * * *

ಆಸ್ತಿ ಸಂಖ್ಯೆ: 96/1/58/1, 57/1, ಚೊಕ್ಕನಹಳ್ಳಿ ಗ್ರಾಮ, ಥಣಿಸಂದ್ರ ಮುಖ್ಯ ರಸ್ತೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ವಾರ್ಡ್ ನಂ. 05, ಯಲಹಂಕ ವಲಯ, ಬೆಂಗಳೂರು, ಇಲ್ಲಿರುವ ಸ್ವತ್ತಿನಲ್ಲಿ ತಳ + ನೆಲ + ಮೇಲಿನ 10 ಅಂತಸ್ತುಗಳ 87 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಉಲ್ಲೇಖ (1) ರಂತೆ ಈ ಕಛೇರಿಯಿಂದ ದಿನಾಂಕ: 02–09–2015 ರಂದು ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ಕಟ್ಟಡಕ್ಕೆ ಉಲ್ಲೇಖ (2) ರಲ್ಲಿ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಾಣ ಪ್ರಾರಂಭಿಸಿದ್ದು, ಆರ್.ಸಿ.ಸಿ. ಸ್ಥಂಭಗಳನ್ನು ನಿರ್ಮಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 05–08–2016 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರದ ಬಾಬ್ತು ಶುಲ್ಕ ರೂ. 78,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms-331-TP/000223 ದಿನಾಂಕ: 09–08–2016 ರಂದು ಸಂದಾಯ ಮಾಡಿರುವುದರಿಂದ, ಸದರಿ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
4. ಉದ್ಯಾನವನ ಹಾಗೂ ಬಯಲು ಜಾಗಕ್ಕೆ ಸ್ಥಳ ಕಾಯ್ದಿರಿಸಿದೇ ಇರುವುದರಿಂದ, ಅಷ್ಟೇ ವಿಸ್ತೀರ್ಣದ ಮಾರುಕಟ್ಟೆ ಬೆಲೆಯನ್ನು ಪಾಲಿಕೆಗೆ ಪಾವತಿಸುವ ಸಂಬಂಧ ಘನ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ ಸಂಖ್ಯೆ: 30348/2015 (ಎಲ್‌ಬಿ–ಬಿಎಂಪಿ) ಗೆ ದಿನಾಂಕ: 01–09–2015 ರಂದು ತಡೆಯಾಜ್ಞೆ ನೀಡಿರುವುದರಿಂದ, ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧರಿರುವುದಾಗಿ ದಿನಾಂಕ: 06–08–2016 ರಂದು ಸಲ್ಲಿಸಿರುವ ಮುಚ್ಚಳಿಕೆ ಪತ್ರದಲ್ಲಿನ ಅಂಶಗಳಿಗೆ ಬದ್ಧರಿರತಕ್ಕದ್ದು.

5. ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

09/08/16.

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

09/08/16 9/8/16 09/8/16

ಗೆ,

M/s. Vajram Estates Pvt. Ltd., (GPA Holder)
Sy No. 61, Shri Vijayaraja Estate,
Chokkanahalli, Thanisandra Main Road,
Yelahanka Hobli,
Bangalore - 560064.